



## ಕ್ಯಾಟ್-ಹೃತಿಕ್ ವಿರಸ?

ಹೃತಿಕ್ ರೋಷನ್ ಮತ್ತು ಕತ್ರೀನಾ ಕೈಫ್ ಉತ್ತಮ ಸ್ನೇಹಿತರು ಎನ್ನುವುದು ಬಿ-ಟೌನಿನ ಮಂದಿಗೆಲ್ಲಾ ಗೊತ್ತಿರುವ ಸತ್ಯ. ಕತ್ರೀನಾ ಎಷ್ಟೋ ಗುಟ್ಟುಗಳನ್ನು ಹೃತಿಕ್ ಬಳಿ ಹಂಚಿಕೊಳ್ಳುವಷ್ಟು ಇಬ್ಬರ ನಡುವೆ ಆತ್ಮೀಯತೆ ಇತ್ತು. ಆದರೆ ಇಬ್ಬರ ಸ್ನೇಹ ಈಗ ಹಿಂದಿನಂತೆ ಉಳಿದಿಲ್ಲ. ಕತ್ರೀನಾ ಹೆಚ್ಚು ಅಂತರ್ಮುಖಿಯಾಗಿದ್ದಾರೆ ಎನ್ನುತ್ತಾರೆ ಅವರನ್ನು 'ಬ್ಯಾಂಗ್ ಬ್ಯಾಂಗ್' ಚಿತ್ರದ ಸೆಟ್‌ನಲ್ಲಿ ಕಂಡವರು. 'ಧೂಮ್ 3' ಸೆಟ್‌ನಲ್ಲಿ ಬಿಡುವು ಸಿಕ್ಕರೆ ಸಾಕು ಕ್ಯಾಟ್, ಹೃತಿಕ್ ಬಳಿ ಕೂತು ಹರಟುತ್ತಿದ್ದರು. ಅದೂ ಸಮಯದ ಪರಿವೇ ಇಲ್ಲದಂತೆ. ಆದರೆ 'ಬ್ಯಾಂಗ್ ಬ್ಯಾಂಗ್' ಚಿತ್ರೀಕರಣದ ಸೆಟ್‌ನಲ್ಲಿ ಅದೇ ವಾತಾವರಣವಿಲ್ಲ. ಶಾಟ್ ಮುಗಿದ ತಕ್ಷಣ ಒಂದು ಕ್ಷಣವೂ ಅಲ್ಲಿ ನಿಲ್ಲದೆ ಕ್ಯಾಟ್ ತಮ್ಮ ಕ್ಯಾರಾವಾನ್ ಒಳಹೊಕ್ಕು ಕೂತುಬಿಡುತ್ತಿದ್ದಾರೆ. ಹೃತಿಕ್ ಮಾತ್ರವಲ್ಲ, ಯಾರೊಂದಿಗೂ ಹೆಚ್ಚು ಬೆರೆಯುತ್ತಿಲ್ಲ. ಕತ್ರೀನಾ ವರ್ತನೆ ವಿಶೇಷ ಅಲ್ಲದಿದ್ದರೂ, ಹೃತಿಕ್ ಕೂಡ ಇದೇ ರೀತಿ ವರ್ತಿಸುತ್ತಿರುವುದು ಅಚ್ಚರಿ ಮೂಡಿಸಿದೆ. ಹೃತಿಕ್ ಸಹ ಶಾಟ್ ಮುಗಿದ ಕೂಡಲೇ ಯಾವುದಕ್ಕೂ ಸಂಬಂಧವೇ ಇಲ್ಲ ಎಂಬಂತೆ ವ್ಯಾನ್‌ನತ್ತ ಧಾವಿಸುತ್ತಿದ್ದಾರೆ. ಕ್ಯಾಟ್ ಮಾತನಾಡಲು ಆಸಕ್ತಿ ತೋರುತ್ತಿಲ್ಲ. ವರ್ಷದ ಆರಂಭದಲ್ಲಿ ಕ್ಯಾಟ್ ಮತ್ತು ಹೃತಿಕ್ ನಡುವೆ 'ಕುಚ್ ಕುಚ್ ಹೋ ಗಯಾ' ಎಂಬ ಸುದ್ದಿ ಹರಡಿತ್ತು. ಇಬ್ಬರೂ ಇದನ್ನು ಶುದ್ಧಸುಳ್ಳು ಎಂದು ತಳ್ಳಿಹಾಕಿದ್ದರು. ಈ ರೀತಿ ಬೆನ್ನು ತಿರುಗಿಸಿ ನಡೆಯಲು ಈ ರೂಮರ್‌ಗಳು ಕಾರಣವೇ? ಅಲ್ಲ ಎನ್ನುತ್ತಾರೆ ಬಿಟೌನ್ ಪಂಡಿತರು. ಕ್ಯಾಟ್ ಉದ್ದೇಶಪೂರ್ವಕವಾಗಿಯೇ ಎಲ್ಲರಿಂದ ದೂರವಿರುತ್ತಿದ್ದಾರೆ. ಅದರಲ್ಲಿಯೂ ಹೃತಿಕ್ ಜೊತೆ ಮಾತನಾಡಿ ಮತ್ತೆ ಗಾಸಿಪ್‌ಗೆ ಆಹಾರವಾಗಲು ಅವರಿಗೆ ಇಷ್ಟವಿಲ್ಲ. ಕ್ಯಾಟ್‌ರ ಈ ನಡೆಯ ಹಿಂದೆ ರಣಬೀರ್ ಕಪೂರ್ ಕೈವಾಡವಿದೆ ಎಂದು ಹೇಳುತ್ತಿದ್ದಾರೆ ಬಲ್ಲವರು.



## ಹಳೆ ಹೈವೇ ಯಲ್ಲಿ ಹೊಸ ಗುಂಡಿ!

ಆಲಿಯಾ ಭಟ್ ಮತ್ತು ರಣದೀಪ್ ಹೂಡಾ ನಟನೆಯ 'ಹೈವೇ' ಬಿಡುಗಡೆಯಾಗಿ ತಿಂಗಳುಗಳೇ ಉರುಳಿವೆ. ಕಥನ, ಅಭಿನಯ, ಸಂವೇದನಾಶೀಲತೆ ಮುಂತಾದ ಕಾರಣಗಳಿಂದ ಸಿನಿಮಾ ಬಾಕ್ಸಾಫೀಸಿನಲ್ಲಿ ಯಶಸ್ವಿಯೂ ಆಯಿತು, ಹೆಸರೂ ಮಾಡಿತು. ಈಗ ಚಿತ್ರಕ್ಕೆ ಸಂಬಂಧಿಸಿದ ಹೊಸ ವಿವಾದ ತಲೆ ಎತ್ತಿದೆ. ಇದು ಪ್ರತಿಷ್ಠೆ ಮತ್ತು ಶ್ರೇಯಸ್ಸಿಗೆ ಸಂಬಂಧಿಸಿದ್ದು. ಚಿತ್ರದ ಯಶಸ್ಸಿನ ಪಾಲೆಲ್ಲಾ ಆಲಿಯಾ ಭಟ್ ಪಾಲಿಗೇ ದಕ್ಕುತ್ತಿದೆ ಎಂಬ ಬೇಸರ ವ್ಯಕ್ತಪಡಿಸಿದ್ದಾರೆ ನಾಯಕ ರಣದೀಪ್ ಹೂಡಾ. ಶ್ರೇಯಸ್ಸು ಮಾತ್ರವಲ್ಲ, 'ಹೈವೇ' ಚಿತ್ರ ಎಂದರೇ ಆಲಿಯಾ ಭಟ್ ಎಂದಾಗಿದೆ ಎನ್ನುವುದು ಅವರ ಬೇಸರ ಇಮ್ಮಡಿಸಲು ಕಾರಣ. ಆಲಿಯಾ ಮತ್ತು ಹೂಡಾ ಇಬ್ಬರ ನಟನೆಗೂ ಪ್ರಶಂಸೆ ವ್ಯಕ್ತವಾಗಿತ್ತು. ಆದರೆ ಅದರ ಹೆಚ್ಚಿನ ಪಾಲು ಆಲಿಯಾಗೆ ಸಿಕ್ಕಿದೆ. ಅದು ಸಹಜ ಕೂಡ.



ಅದನ್ನು ಆಲಿಯಾ ಸಹ ಒಪ್ಪಿಕೊಳ್ಳುತ್ತಾರೆ. ಏಕೆಂದರೆ ಆಲಿಯಾರಿಂದ ಯಾರೂ ಅಂಥ ಪ್ರಬುದ್ಧ ಅಭಿನಯ ನಿರೀಕ್ಷಿಸಿರಲಿಲ್ಲ. 'ರಣದೀಪ್ ನಕಾರಾತ್ಮಕವಾಗಿ ಯೋಚಿಸುವವರಲ್ಲ. ಇಬ್ಬರೂ ಒಳ್ಳೆ ದಿನಗಳನ್ನು ಹಂಚಿಕೊಂಡಿದ್ದೇವೆ. ರಣದೀಪ್ ಆಗಲೇ ಅದ್ಭುತ ಅಭಿನಯದಿಂದ ಹೆಸರು ಮಾಡಿದವರು. ಅವರಿಂದ ಎಲ್ಲರೂ ಅಂಥ ಅಭಿನಯ ನಿರೀಕ್ಷಿಸಿದ್ದರು. ಆದರೆ ನಾನು ಹೊಸಬಳು. 'ಹೈವೇ'ನಲ್ಲಿ ಅದೇ ಅಚ್ಚರಿಯ ಸಂಗತಿಯಾಯಿತು. ರಣದೀಪ್ ಇಲ್ಲದಿದ್ದರೆ ಚಿತ್ರದಲ್ಲಿ ನನ್ನ ಪಾಲು ಏನೂ ಇರುತ್ತಿರಲಿಲ್ಲ. ಅಲ್ಲದೆ, ಯಾರೂ ರಣದೀಪ್ ಅಭಿನಯ ಚೆನ್ನಾಗಿರಲಿಲ್ಲ ಎಂದಿಲ್ಲ. ಇಬ್ಬರಿಗೂ ಇದು ಮಹತ್ವದ ಸಿನಿಮಾ ಆಗಿತ್ತು. ರಣದೀಪ್ ಬೇಸರಪಟ್ಟುಕೊಳ್ಳಲು ಯಾವ ಕಾರಣವೂ ಇಲ್ಲ' ಎಂದಿದ್ದಾರೆ ಆಲಿಯಾ.

ಖ್ಯಾತ ನಿರ್ದೇಶಕ ಮಹೇಶ್ ಭಟ್ ಅವರ ಮಗಳಾಗಿದ್ದರೂ ಬಾಲಿವುಡ್‌ನಲ್ಲಿ ಉಳಿಯುವುದು ಅಷ್ಟು ಸುಲಭವಲ್ಲ ಎನ್ನುವುದು ಆಲಿಯಾರ ಅನುಭವಕ್ಕೆ ಬಂದಿದೆಯಂತೆ. ಗಾಡ್‌ಫಾದರ್‌ಗಳಿಲ್ಲದೆಯೇ ಬರುವವರಂತೆಯೇ ನಾನೂ ಸಮಸ್ಯೆಗಳನ್ನು ಎದುರಿಸುತ್ತಿದ್ದೇನೆ. ಒಂದು ವೇಳೆ ಮಹೇಶ್ ಭಟ್ ಮಗಳಾಗದೇ ಹೋಗಿದ್ದರೆ ಈ ಕ್ಷೇತ್ರದಲ್ಲಿ ನನ್ನ ಹೆಸರು ಇರುತ್ತಲೇ ಇರಲಿಲ್ಲ ಎಂದಿದ್ದಾರೆ ಆಲಿಯಾ.

■ ಅಮಿ